ಅ) ಬಡ್ಜೆಟ್ ಅನುದಾನ ಈ ಕೆಳಕಂಡಂತೆ ಇದೆ. 1990-91, ರೂ. 1665,75,21,000 1991-92 ರೂ.1,85,64,00,000

ಆ) 1991-92ನೇ ಸಾಲಿನಲ್ಲಿ ಹೊಸದಾಗಿ 15 ಪೋಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಿದೆ.

ಇ) ಮತ್ತು ಈ) ಇದೂ ಸಹಾ ಸರ್ಕಾರದ ಪರಿಶೀಲನೆಯಲ್ಲಿದೆ.

ಅಬಕಾರಿ ಅಧಿನಿಯಮ

2769 - ಶ್ರೀ ಪ್ರಭಾಕರ್ ಎಸ್. ರಾಣೆ(ಕಾರವಾರ): ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಅಧಿನಿಯಮಕ್ಕೆ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಲಾಗಿದೆಯೆ

ಆ) ಹಾಗಿದ್ದಲ್ಲಿ, ಅದು ಚಾಲ್ತಿಯಲ್ಲಿದೆಯೇ ಅಥವಾ ರದ್ದಾಗಿದೆಯೇ

ಇ) ರದ್ದಾಗಿದ್ದಲ್ಲಿ ಹಾಗಾಗಲು ಕಾರಣಗಳೇನು?

ಶ್ರೀ ಧರ್ಮಸಿಂಗ್(ಗೃಹ ಮತ್ತು ಅಬಕಾರಿ ಸಚಿವರು):

ಅ) ಹೌದು.

ಆ) ರದ್ದಾಗಿದೆ.

ಇ) ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಪ್ರಕರಣಗಳು ಬಾಕಿ ಉಳಿದಿರುವುದರಿಂದ, ಇದನ್ನು ಕೈಬಿಡಬೇಕೆಂದು ತೀರ್ಮಾನಿಸಲಾಯಿತು.

ಬಂಗಾರು ಪೇಟೆ ಪುರಸಭೆಯ ಬಗ್ಗೆ

3225 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಬಂಗಾರು ಪೇಟೆ ಪುರಸಭೆಯು ಅಮರಾವತಿ ಬಡಾವಣೆಯನ್ನು ತಮ್ಮ ವ್ಯಾಪ್ತಿಗೆ ತೆಗೆದುಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಬಂಗಾರುಪೇಟೆ ಪುರಸಭೆಯು ಬಡಾವಣೆಯಲ್ಲಿ ವಾಸವಿರುವ ಜನರಿಗೆ ನಾಗರೀಕ ಸೌಲಭ್ಯ ಒದಗಿಸಿದೆಯೇ?

ಇ) ಹಾಗಿದ್ದಲ್ಲಿ ಅದಕ್ಕಾಗಿ ವೆಚ್ಚ ಮಾಡಿರುವ ಒಟ್ಟು ಹಣವೆಷ್ಟು? ಹಾಗೂ ಒದಗಿಸಿರುವ ನಾಗರೀಕ ಸೌಲಭ್ಯಗಳೇನು?

ಈ) ಸರ್ಕಾರವು ಈ ಬಡಾವಣೆಗೆ ನಾಗರೀಕ ಸೌಲಭ್ಯ ಒದಗಿಸುವ ಬಗ್ಗೆ ಹಣ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಕೆ.ಜೆ.ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಹೌದು.

ಇ) ಪುರಸಭೆಯು ಈವರೆಗೆ 1.00 ಲಕ್ಷ ರೂ. ಗಳನ್ನು ನಾಗರೀಕ ಸೌಲಭ್ಯ ಒದಗಿಸುವ ಸಲುವಾಗಿ ವೆಚ್ಚ ಮಾಡಿದೆ.

ವಿವರ:

1. ಎರಡು ಕೊಳವೆ ಬಾವಿಗಳನ್ನು ಕೊರೆಸಿ, ಕೈಪಂಪುಗಳನ್ನು ಒದಗಿಸುವುದು. ರೂ. 50,000